# ಕರ್ನಾಟಕ ಲೋಕಾಯುಕ್ತ

ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/2314/2021
ಪಿ.ಓ.ಎ.ಆರ್.ಇ-5(ಮಂಡನಾಧಿಕಾರಿಯವರ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 14/01/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: 1) ಶ್ರೀ. ಓಂಕಾರಮೂರ್ತಿ ಬಡಿಗೇರ್ ಬಿನ್ ವೀರಾಚಾರ್ ಬಡಿಗೇರ್, ಕಿರಿಯ ಅಭಿಯಂತರರು, ಪಟ್ಟಣ ಪಂಚಾಯತ್ ಯಲಬುರ್ಗಾ, ಕೊಪ್ಪಳ ಜಿಲ್ಲೆ,

2) ಶ್ರೀ. ಮಹಂತೇಶ್ ಗಿಂಡೇರ್ ಬಿನ್ ಮೈಲಾರಪ್ಪ ಗಿಂಡೇರ್, ನೀರು ಸರಬರಾಜು ಕೆಲಸಗಾರ (ಹೊರಗುತ್ತಿಗೆ) ಪಟ್ಟಣ ಪಂಚಾಯತ್ ಯಲಬುರ್ಗಾ, ಕೊಪ್ಪಳ ಜಿಲ್ಲೆ,

ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.

****

1. ಆರಕ್ಷಕ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ, ಕೊಪ್ಪಳ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ 1) ಶ್ರೀ. ಓಂಕಾರಮೂರ್ತಿ ಬಡಿಗೇರ್ ಬಿನ್ ವೀರಾಚಾರ್ ಬಡಿಗೇರ್, ಕಿರಿಯ ಅಭಿಯಂತರರು, ಪಟ್ಟಣ ಪಂಚಾಯತ್ ಯಲಬುರ್ಗಾ, ಕೊಪ್ಪಳ ಜಿಲ್ಲೆ, 2) ಶ್ರೀ. ಮಹಂತೇಶ್ ಗಿಂಡೇರ್ ಬಿನ್ ಮೈಲಾರಪ್ಪ ಗಿಂಡೇರ್, ನೀರು ಸರಬರಾಜು ಕೆಲಸಗಾರ (ಹೊರಗುತ್ತಿಗೆ) ಪಟ್ಟಣ ಪಂಚಾಯತ್ ಯಲಬುರ್ಗಾ, ಕೊಪ್ಪಳ ಜಿಲ್ಲೆ, (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಶ್ರೀ. ಶಿವಪ್ಪ ಬಸಪ್ಪ ರಾಂಪೂರ, ಗುತ್ತಿಗೆದಾರರು, ಸಾ: ಕರಮುಡಿ, ತಾ: ಯಲಬುರ್ಗಾ, ಕೊಪ್ಪಳ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ತಾನು ಗುತ್ತಿಗೆದಾರರನಾಗಿದ್ದು, ದಿ: 04/01/2013ರ ಕಾರ್ಯಾದೇಶದ ಪ್ರಕಾರ ಪರಿಶಿಷ್ಟ ಜಾತಿ ಪಂಗಡಗಳ ಫಲಾನುಭವಿಗಳಿಗೆ ವೈಯುಕ್ತಿಕ ನಳ ಕಲ್ಪಿಸುವ ಕಾಮಗಾರಿಯನ್ನು ಅಂದಾಜು ಪಟ್ಟಿಯಂತೆ 2014-15 ನೇ ಸಾಲಿನಲ್ಲಿ ಪೂರ್ಣಗೊಳಿಸಿದ್ದು, ಎಂ.ಬಿ. ಪುಸ್ತಕ ನಂ.57 ರಲ್ಲಿ ಆ ಬಗ್ಗೆ ದಾಖಲಾಗಿದ್ದು, ಅದರ ಪ್ರಕಾರ ಬಿಲ್ ತಯಾರಿಸಿ, ಕೊಪ್ಪಳ ಸಹಾಯಕ ಕಾರ್ಯಪಾಲಕ ಅಭಿಯಂತರವರಿಗೆ

ಕಳುಹಿಸಿಕೊಡಲು 1 ಮತ್ತು 2ನೇ ಎದುರುದಾರರು 15,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿದ ಬಗ್ಗೆ ಬರೆದುಕೊಂಡಿದ್ದು ಸದರಿ ದೂರು ಕೊಪ್ಪಳ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ.03/2017 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 8, 13 (1) (ಡಿ) ರೆ/ವಿ 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ 1ನೇ ಎದುರುದಾರರು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 15,000/- ರೂ. ಲಂಚಕ್ಕೆ ಡಿಮ್ಯಾಂಡ್ ಮಾಡಿ, 2ನೇ ಎದುರುದಾರರು 15,000/-ರೂ. ಲಂಚವನ್ನು 1ನೇ ಎದುರುದಾರರ ಪರವಾಗಿ ಪಡೆಯುವಾಗ ರೆಡ್‌ಹ್ಯಾಂಡಾಗಿ ಸಿಕ್ಕು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i) ದೂರುದಾರರಾದ **ಶ್ರೀ. ಶಿವಪ್ಪ ಬಸಪ್ಪ ರಾಂಪೂರ, ಗುತ್ತಿಗೆದಾರರು, ಸಾ: ಕರಮುಡಿ, ತಾ: ಯಲಬುರ್ಗಾ, ಕೊಪ್ಪಳ ಜಿಲ್ಲೆ** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ತಾನು ಗುತ್ತಿಗೆದಾರನಾಗಿದ್ದು, ದಿ: 30/10/2012 ರಂದು ಪರಿಶಿಷ್ಟ ಜಾತಿ, ಪಂಗಡದ ಫಲಾನುಭವಿಗಳಿಗೆ ವೈಯುಕ್ತಿಕ ನಳ ಸಂಪರ್ಕ ಕಲ್ಪಿಸುವ ಕಾಮಗಾರಿ, ಇದರ ಅಂದಾಜು ವೆಚ್ಚ 1.5 ಲಕ್ಷ ಇದಕ್ಕೆ ಅರ್ಜಿ ಹಾಕಿ, ದಿ: 04/01/2013 ರಂದು ಕಾಮಗಾರಿ ಆದೇಶವನ್ನು ಪಟ್ಟಣ ಪಂಚಾಯತಿಯಿಂದ ಪಡೆದುಕೊಂಡಿದ್ದು, ಸಕಾಲಕ್ಕೆ 1ನೇ ಎದುರುದಾರರು ಫಲಾನುಭವಿಗಳ ಪಟ್ಟಿ ಕೊಡಲಿಲ್ಲವಾದ್ದರಿಂದ, ಅಂದಾಜು ಪಟ್ಟಿಯಂತೆ 2014-15ನೇ ಸಾಲಿನಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಎಂ.ಬಿ. ಪುಸ್ತಕ ನಂ.57 ರಲ್ಲಿ ಆ ಬಗ್ಗೆ ದಾಖಲಾಗಿದ್ದು, ಅದರ ಪ್ರಕಾರ ಸಿ.ಸಿ.ಬಿಲ್ ತಯಾರಿಸಿ, 1ನೇ ಎದುರುದಾರರು ಸಹಿಮಾಡಿ ಬಿಲ್ಲನ್ನು ಕೊಪ್ಪಳ ಸಹಾಯಕ ಕಾರ್ಯಪಾಲಕ ಅಭಿಯಂತರವರಿಗೆ ಕಳುಹಿಸಿಕೊಡಲು, 1ನೇ ಎದುರುದಾರರನ್ನು ಕೇಳಲಾಗಿ ವಿನಾಕಾರಣ ದಿನಮೇಕ್ ಮಾಡುತ್ತಾ ಬಂದಿದ್ದು, ದಿ: 14/04/2017 ರಂದು 1ನೇ ಎದುರುದಾರರನ್ನು ಭೇಟಿಯಾಗಿ ವಿಚಾರಿಸಲಾಗಿ, ಇದು ಹಳೇ ಬಿಲ್ ಆಗಿದ್ದರಿಂದ, 15,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಅಷ್ಟೂ ಹಣವನ್ನು ಕೊಡಲು ಆಗುವುದಿಲ್ಲವೆಂದಾಗ ತನ್ನ ಅಸಿಸ್ಟೆಂಟ್ ಆದ 2ನೇ ಎದುರುದಾರರನ್ನು ಭೇಟಿಯಾಗಲು ತಿಳಿಸಿರುತ್ತಾರೆ. ದಿ: 16/04/2017 ರಂದು 2ನೇ ಎದುರುದಾರರ ಮೊಬೈಲ್‌ಗೆ ದೂರುದಾರರು ಫೋನ್ ಮಾಡಲಾಗಿ ಇದು ಹಳೇ ಬಿಲ್ ಆಗಿದ್ದರಿಂದ 1ನೇ ಎದುರುದಾರರು 15,000/- ರೂ.

ಇಸಿದುಕೊಳ್ಳಲು ಹೇಳಿದ್ದಾರೆ ಎಂದು ಹೇಳಿ, 15,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಅದೇ ಪ್ರಕಾರ ದಿ: 18/04/2017 ರಂದು 1ನೇ ಎದುರುದಾರರ ಮೊಬೈಲ್‌ಗೆ ದೂರುದಾರರು ಫೋನ್ ಮಾಡಲಾಗಿ 15,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ii) ದೂರುದಾರರಿಗೆ ಲಂಚ ಕೊಡಲು ಮನಸ್ಸಿಲ್ಲವಾದ್ದರಿಂದ ದಿ: 20/04/2017 ರಂದು ಕೊಪ್ಪಳ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.03/2017 ರಲ್ಲಿ ಕಲಂ 7, 8, 13 (1) (ಡಿ) ರೆ/ವಿ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಸುಖಮುನಿಯಪ್ಪ 2) ಕಲ್ಯಾಣ್‌ಕುಮಾರ್ (ನೆರಳುಸಾಕ್ಷಿ) ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ಸದರಿ ಸಂಭಾಷಣೆಯನ್ನು ತನಿಖಾಧಿಕಾರಿಯವರು ಲಿಪಿಕರಿಸಿಕೊಂಡು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಲಂಚ ನೀಡಲು ತಂದ ರೂ. 15,000/- (500X2, 2000X7) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚ-1 ಸುಖಮುನಿಯಪ್ಪನವರು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಪೊಲೀಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-1 ರವರ ಮೂಲಕ ದೂರುದಾರರ ಶರ್ಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಪಂಚ-1 ಸುಖಮುನಿಯಪ್ಪ ಇವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಕಲ್ಯಾಣ್‌ಕುಮಾರ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಹಾಗೂ ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ವಾಯ್ಸ ರೆಕಾರ್ಡರನ್ನು ನೀಡಿರುತ್ತಾರೆ. ಲಂಚ ಪಡೆದುಕೊಂಡ ನಂತರ ಕೆನ್ನೆ ಸವರಿಕೊಳ್ಳುವ

ಮೂಲಕ ಸಂಜ್ಞೆ ನೀಡುವಂತೆ ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 20/04/2017 ರಂದು ಸಮಯ 12.00 ರಿಂದ 2.30 ಘಂಟೆಯವರೆಗೆ ಕೊಪ್ಪಳ ಎಸಿಬಿ ಠಾಣೆಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ, ಸಂಜೆ 4.30 ಗಂಟೆಗೆ ಯಲಬುರ್ಗಾ ತಲುಪಿ ಬಸ್‌ಸ್ಟ್ಯಾಂಡ್ ಹತ್ತಿರ ವಾಹನಗಳನ್ನು ನಿಲ್ಲಿಸಿ, ದೂರುದಾರರು ಹಾಗೂ ನೆರಳುಸಾಕ್ಷಿಯನ್ನು ಪಟ್ಟಣ ಪಂಚಾಯಿತಿ ಒಳಗೆ ಕಳುಹಿಸಿ, ದಾಳಿತಂಡದವರು ಆವರಣದಲ್ಲಿ ಅಲ್ಲಲ್ಲಿ ಗುಪ್ತವಾಗಿ ನಿಂತಿರುತ್ತಾರೆ. ಸಂಜೆ 7 ಗಂಟೆಗೆ ದೂರುದಾರರು ತನಿಖಾಧಿಯವರ ಹತ್ತಿರ ಬಂದು 2ನೇ ಎದುರುದಾರರು ಕಾರ್ಯಾಲಯದಲ್ಲಿ ಇಲ್ಲವಾದ್ದರಿಂದ ಸದರಿಯವರಿಗೆ ಫೋನ್ ಮಾಡಲಾಗಿ ನಾಳೆ ಬರುವಂತೆ ತಿಳಿಸಿದ್ದಾಗಿ ನುಡಿದಿರುತ್ತಾರೆ. ಆ ಕಾರಣದಿಂದ ತನಿಖೆಯನ್ನು ಸ್ಥಗಿತಗೊಳಿಸಿ, ಕೊಪ್ಪಳ ಎಸಿಬಿ ಕಚೇರಿಗೆ ವಾಪಸ್ಸಾಗಿ, ಲಂಚದ ಹಣವನ್ನು ದೂರುದಾರರಿಗೆ ಇಟ್ಟುಕೊಳ್ಳಲು ತಿಳಿಸಿ ಮತ್ತು ಮುಂದಿನ ಕ್ರಮಕ್ಕೆ ನಾಳೆ ಬೆಳಿಗ್ಗೆ 7.00 ಗಂಟೆಗೆ ಹಾಜರಾಗಬೇಕೆಂದು ತಿಳಿಸಿರುತ್ತಾರೆ. ಆ ಕುರಿತಂತೆ ರಾತ್ರಿ 8.30 ರಿಂದ 9.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ.

ದೂರುದಾರರು, ಪಂಚರು ದಿ: 21/04/2017 ರಂದು ಬೆಳಿಗ್ಗೆ 7.00 ಗಂಟೆಗೆ ಎಸಿಬಿ ಠಾಣೆಯಲ್ಲಿ ಹಾಜರಿದ್ದು, ದೂರುದಾರರು ಲಂಚ ಕೊಡಲು ತಂದ ಹಣವನ್ನು ಹಾಜರುಪಡಿಸಿದ್ದು, ಪಂಚ-1 ರವರು ಸದರಿ ನೋಟುಗಳ ನಂಬರುಗಳನ್ನು ಬಿಳಿ ಹಾಳೆಯಲ್ಲಿ ಬರೆದುಕೊಂಡು, ಸದರಿ ಹಣವನ್ನು ದೂರುದಾರರ ಶರ್ಟ್ ಜೇಬಿನಲ್ಲಿ ಇಟ್ಟಿರುತ್ತಾರೆ ಮತ್ತು ನಿನ್ನೆ ಹೇಳಿದ ಸೂಚನೆಗಳನ್ನು ಪಾಲಿಸುವಂತೆ ಮತ್ತೊಮ್ಮೆ ನೆನಪಿಸಿ, ಲಂಚ ನೀಡುವಾಗ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ವಾಯ್ಸ್ ರೆಕಾರ್ಡರನ್ನು ನೀಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ಕೊಪ್ಪಳ ಎಸಿಬಿ ಕಚೇರಿಯಲ್ಲಿ ದಿ: 21/04/2017 ರಂದು ಬರೆದ ಮಹಜರ್‌ನಲ್ಲಿ ದಾಖಲಿಸಲಾಗಿದೆ.

ದಾಳಿತಂಡದವರು ಕೊಪ್ಪಳವನ್ನು ಬಿಟ್ಟು ಬೆಳಿಗ್ಗೆ 11.30 ಕ್ಕೆ ಯಲಬುರ್ಗಾ ತಲುಪಿ ಬಸ್ ನಿಲ್ದಾಣದ ಹತ್ತಿರ ವಾಹನಗಳನ್ನು ನಿಲ್ಲಿಸಿ, ದೂರುದಾರರು ಹಾಗೂ ನೆರಳುಸಾಕ್ಷಿ ಕಲ್ಯಾಣ್‌ಕುಮಾರ್ ಇವರನ್ನು ಪಟ್ಟಣ ಪಂಚಾಯತ್ ಕಾರ್ಯಾಲಯದ ಒಳಗೆ ಕಳುಹಿಸಿ, ದಾಳಿ ತಂಡದವರು ಗೌಪ್ಯವಾಗಿ ಕಾರ್ಯಾಲಯದ ಆವರಣದಲ್ಲಿ ಮರೆಯಾಗಿ ಸಂಶಯಬರದಂತೆ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ. ಸ್ವಲ್ಪ ಹೊತ್ತಿನಲ್ಲಿ ದೂರುದಾರರು ಕಚೇರಿಯಿಂದ ಹೊರಗಡೆ ಬಂದು ತನಿಖಾಧಿಕಾರಿಗೆ ಸಂಜ್ಞೆ ನೀಡಿರುತ್ತಾರೆ. ತಕ್ಷಣ ದಾಳಿತಂಡದವರು ಕಾರ್ಯಾಲಯದ ಒಳಗೆ ದೂರುದಾರರು

ಇದ್ದಲ್ಲಿಗೆ ಬಂದಿದ್ದು, ದೂರುದಾರರನ್ನು ಕೇಳಲಾಗಿ ಒಳಗಡೆ ಬರುವಾಗ 1ನೇ ಎದುರುದಾರರು ಸಿಕ್ಕಿದ್ದು, ಸದರಿಯವರನ್ನು ಕೆಲಸದ ಬಗ್ಗೆ ಕೇಳಲಾಗಿ, ಸದರಿಯವರು 2ನೇ ಎದುರುದಾರರ ಕೈಯಲ್ಲಿ ಹಣವನ್ನು ನೀಡುವಂತೆ ತಿಳಿಸಿದ ಮೇರೆಗೆ, ಹಣವನ್ನು 2ನೇ ಎದುರುದಾರರಿಗೆ ನೀಡಿದ್ದು, ಸದರಿ ಹಣವನ್ನು 2ನೇ ಎದುರುದಾರರು ಬಲಗೈನಿಂದ ಪಡೆದುಕೊಂಡು, ಹೊರಗಡೆ ಬಂದು ಗಿಡದ ಮರೆಯಲ್ಲಿ ಹಣವನ್ನು ಎಣಿಸಿ, ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ ಮತ್ತು ಇವರೇ 1 ಮತ್ತು 2ನೇ ಎದುರುದಾರರೆಂದು ತೋರಿಸಿರುತ್ತಾರೆ. ತನಿಖಾಧಿಕಾರಿಯವರು ತಮ್ಮ ಪರಿಚಯ ಮಾಡಿಕೊಂಡು ತನಿಖೆಗೆ ಸಹಕರಿಸುವಂತೆ 1 ಮತ್ತು 2ನೇ ಎದುರುದಾರರಿಗೆ ತಿಳಿಸಿರುತ್ತಾರೆ. 2ನೇ ಎದುರುದಾರರ ಎರಡೂ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ ವಿಚಾರಿಸಲಾಗಿ, 2ನೇ ಎದುರುದಾರರು ಹಣವನ್ನು ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದು, ಸದರಿ ಹಣವನ್ನು 2ನೇ ಎದುರುದಾರರು ಪಂಚ-2 ರವರ ಕೈಯಲ್ಲಿ ಕೊಟ್ಟಿದ್ದು, ಸದರಿ ನೋಟುಗಳ ನಂಬರ್‌ಗಳನ್ನು ಪಂಚರು ತಾಳೆಮಾಡಿ ನೋಡಲಾಗಿ ನೋಟುಗಳ ನಂಬರುಗಳು ತಾಳೆಯಾದ ಮೇರೆಗೆ ತನಿಖಾಧಿಕಾರಿಯವರು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. 2ನೇ ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ, ಲಂಚದ ಹಣವನ್ನು ಇಟ್ಟುಕೊಂಡ ಪ್ಯಾಂಟನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿಲ್ಲವೆಂದು ದೂರುದಾರರು ತಿಳಿಸಿದ್ದರಿಂದ, ವಾಯ್ಸ್ ರೆಕಾರ್ಡರನ್ನು ವಾಪಸ್ಸು ಪಡೆದುಕೊಂಡಿರುತ್ತಾರೆ. 2ನೇ ಎದುರುದಾರರು ತಮ್ಮ ಸ್ವರಕ್ಷಣಾ ಹೇಳಿಕೆಯಲ್ಲಿ ದೂರುದಾರರು ತನ್ನ ಹತ್ತಿರ ಬಂದು 1ನೇ ಎದುರುದಾರರು ತಮ್ಮನ್ನು ಭೇಟಿಯಾಗಲು ತಿಳಿಸಿದ್ದಾರೆ ಎಂದು ಹೇಳಿ ಹಣ ಕೊಟ್ಟು ಹೋದರು ಎಂದು ಬರೆದುಕೊಟ್ಟಿರುತ್ತಾರೆ. ಅದೇ ಪ್ರಕಾರ 1ನೇ ಎದುರುದಾರರು ತಮ್ಮ ಸ್ವರಕ್ಷಣಾ ಹೇಳಿಕೆಯಲ್ಲಿ ಅಂದಾಜು ಪಟ್ಟಿಗೂ ಹಾಗೂ ಕೆಲಸಕ್ಕೂ ತುಂಬಾ ವ್ಯತ್ಯಾಸವಿದ್ದು, ತಾಳೆಯಾಗುತ್ತಿಲ್ಲ, ಹೊಸದಾಗಿ ಕಾಮಗಾರಿ ಮಾಡಿಸಿದಲ್ಲಿ ಮಾತ್ರ ಬಿಲ್ ಕೊಡಲು ಬರುತ್ತದೆ, ಮಾಡದೇ ಇರುವ ಕಾಮಗಾರಿಗೆ ಬಿಲ್ ಮಾಡಲು ಬರುವುದಿಲ್ಲವೆಂದು ಹೇಳಿರುವುದಾಗಿ ಬರೆದು ಕೊಟ್ಟಿರುತ್ತಾರೆ. ತನಿಖಾಧಿಕಾರಿಯವರು ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯ ಪ್ರತಿಲೇಖನದ ಪ್ರಿಂಟೌಟ್ ತೆಗೆದು ಮೂರು ಬಾರಿ ಓದಿಸುವ ಮೂಲಕ 1 ಮತ್ತು 2ನೇ ಎದುರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿ.ಡಿ.ಗೆ ವರ್ಗಾಯಿಸಿರುತ್ತಾರೆ. ದಾಖಲೆಗಳ ಬಗ್ಗೆ ವಿಚಾರಿಸಲಾಗಿ, 1ನೇ ಎದುರುದಾರರು ದಾಖಲೆಗಳನ್ನು ತನ್ನ ಕೊಪ್ಪಳದ ಮನೆಯಲ್ಲಿ

ಇಟ್ಟಿರುವುದಾಗಿ ತಿಳಿಸಿರುತ್ತಾರೆ. ಕಾರ್ಯಾಲಯದ ಬೆರಳಚ್ಚುಗಾರರಾದ ಚನ್ನಬಸಪ್ಪ ಅಗಡಿ ಇವರಿಗೆ ಲಂಚ ಬೇಡಿಕೆಯ ಸಂಭಾಷಣೆಯನ್ನು ಕೇಳಿಸಲಾಗಿ ಅದರಲ್ಲಿರುವ ಧ್ವನಿಯು ಎದುರುದಾರರುಗಳದ್ದೆಂದು ಗುರುತಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 21/04/2017 ರಂದು ಮಧ್ಯಾಹ್ನ 12.15 ರಿಂದ ಸಂಜೆ 6.30 ಗಂಟೆಯವರೆಗೆ ಪಟ್ಟಣ ಪಂಚಾಯತಿಯ ಕಂದಾಯ ಹಾಗೂ ಆಡಳಿತ ವಿಭಾಗದ ಎಡಪಕ್ಕವಿರುವ 2ನೇ ಎದುರುದಾರರ ರೂಮಿನಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

ಟ್ರ್ಯಾಪ್ ಮಹಜರ್ ಮುಗಿದ ನಂತರ ಪಂಚರೊಂದಿಗೆ ಕೊಪ್ಪಳಕ್ಕೆ ತೆರಳಿ, 1ನೇ ಎದುರುದಾರರ ಮನೆಯಲ್ಲಿದ್ದ ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ರಾತ್ರಿ 8.30 ರಿಂದ 9.30 ಗಂಟೆಯವರೆಗೆ ಮಹಜರ್ ಮಾಡುವ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ.

iv) ತನಿಖಾ ಕಾಲದಲ್ಲಿ 2ನೇ ಎದುರುದಾರರ ಕೈ ಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಹಾಗೂ ಹಣ ಇಟ್ಟುಕೊಂಡ ಪ್ಯಾಂಟಿನಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ. ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯಲ್ಲಿಯ ಧ್ವನಿಯು 1 ಮತ್ತು 2ನೇ ಎದುರುದಾರರದೆಂದು ಕಾರ್ಯಾಲಯದ ಬೆರಳಚ್ಚುಗಾರ ಚನ್ನಬಸಪ್ಪ ಅಂಗಡಿಯವರು ಗುರುತಿಸಿದ್ದಾರೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. 1 ಮತ್ತು 2ನೇ ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. 1ನೇ ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. 1 ಮತ್ತು 2 ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ಸಲ್ಲಿಸಿದ್ದು, ಸದರಿ ಸಮಜಾಯಿಷಿಯಲ್ಲಿ 1ನೇ ಎದುರುದಾರರು ಬರೆದುಕೊಂಡ ಅಂಶವೇನೆಂದರೆ, ತಾನು 2ನೇ ಎದುರುದಾರರ ಕೈಯಲ್ಲಿ ಲಂಚದ ಹಣವನ್ನು ಕೊಡುವಂತೆ ತಿಳಿಸಿರುವುದಿಲ್ಲ. ಅಳತೆ ಪುಸ್ತಕವನ್ನು ಬರೆದು ದೃಢಿಕರಿಸಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಎ.ಸಿ.ಬಿ ಅಧಿಕಾರಿಗಳು ತನ್ನನ್ನು ಲಂಚದ ಬಲೆಗೆ ಸಿಲುಕಿಸಲು ಸಂಚು

ನಡೆಸಿದ್ದು, ಅದರ ಆಧಾರದ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಬಾರದು. 2ನೇ ಎದುರುದಾರರು ಕೇಸಿನಿಂದ ಬಚಾವ ಆಗಲು ಸತ್ಯಕ್ಕೆ ದೂರವಾದ ಹೇಳಿಕೆಯನ್ನು ನೀಡಿದ್ದು, ಅದನ್ನು ತಿರಸ್ಕರಿಸಬೇಕು. ತಾನು ಲಂಚ ಸ್ವೀಕರಿಸಿದ ಆಪಾದನೆಗೆ ಒಳಪಟ್ಟಿರುವುದಿಲ್ಲ. 1ನೇ ಎದುರುದಾರರು ಲಂಚದ ಹಣ ಸ್ವೀಕರಿಸಿರುವುದು ಪಂಚನಾಮೆಯಿಂದ ಸ್ಪಷ್ಟವಾಗುತ್ತದೆ. ತನ್ನನ್ನು ಆರೋಪಿಯಾಗಿ ಪರಿಗಣಿಸಿದೇ ಸಾಕ್ಷಿಯಾಗಿ ಪರಿಗಣಿಸಬೇಕು. ತನಿಖಾಧಿಕಾರಿಗಳು ದಿ: 21/04/2017 ರಂದು ತನ್ನ ಮನೆಯಲ್ಲಿದ್ದ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿರುವುದು ಆಡಳಿತಾತ್ಮಕ ಕ್ರಮವಾಗಿರುತ್ತದೆಯೇ ಹೊರತು ದುರ್ನಡತೆ ಆಗಿರುವುದಿಲ್ಲ. ಚನ್ನಬಸಪ್ಪ ಅಂಗಡಿ ಇವರನ್ನು ಹೆದರಿಸಿ ಸದರಿಯವರು ತನ್ನ ಧ್ವನಿಯನ್ನು ಗುರ್ತಿಸಿದಂತೆ ಹೇಳಿಕೆ ಪಡೆದುಕೊಂಡಿರುತ್ತಾರೆ. ತಾನು ಕೆ.ಸಿ.ಎಸ್.ಆರ್ ನಡತೆ ನಿಯಮಗಳನ್ನು ಉಲ್ಲಂಘಿಸಿರುವುದಿಲ್ಲ ಮತ್ತು ಪ್ರಾಮಾಣಿಕವಾಗಿ ನಡೆದುಕೊಂಡಿರುತ್ತೇನೆ. ಈ ಮೇಲ್ಕಂಡ ಕಾರಣಗಳಿಂದ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ವಿನಂತಿಸಿರುತ್ತಾರೆ.

ಅದೇ ಪ್ರಕಾರ 2ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಯಲ್ಲಿ ಮಾಡಿದ ಆಪಾದನೆಯನ್ನು ಅಲ್ಲಗಳೆದಿರುತ್ತಾರೆ. 1ನೇ ಎದುರುದಾರರ ಪರವಾಗಿ ತಾನು ಲಂಚಕ್ಕೆ ಬೇಡಿಕೆ ಇಟ್ಟಿರುತ್ತೇನೆ ಎನ್ನುವುದು ಸತ್ಯಕ್ಕೆ ದೂರವಾಗಿರುತ್ತದೆ. 1ನೇ ಎದುರುದಾರರ ಪರವಾಗಿ ರೂ. 15,000/- ಲಂಚವನ್ನು ಪಡೆದುಕೊಳ್ಳಲು ತನಗೆ ತಿಳಿಸಿದ್ದಾರೆಂದು ತಾನು ದೂರುದಾರರಿಗೆ ಹೇಳಿರುವುದಿಲ್ಲ. ಎ.ಸಿ.ಬಿ ಅಧಿಕಾರಿಗಳು ಭ್ರಷ್ಟರನ್ನು ಬಲೆಗೆ ಸಿಲುಕಿಸಲು ಸಂಚು ಮಾಡಿರುತ್ತಾರೆ. ಅದರ ಆಧಾರದ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಬಾರದೆಂದು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಲ್ಲಿ ಉಲ್ಲೇಖಿಸಿದ ಬಗ್ಗೆ ಬರೆದುಕೊಂಡಿದ್ದಾರೆ. ಬೆರಳಚ್ಚುಗಾರರಾದ ಚನ್ನಬಸಪ್ಪ ಅಂಗಡಿ ಇವರನ್ನು ಹೆದರಿಸಿ ಹೇಳಿಕೆ ಮಾಡಿಕೊಂಡಿದ್ದರಿಂದ ಅದು ನೈಜ ಹೇಳಿಕೆ ಆಗಿರುವುದಿಲ್ಲ. ನಾನು ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದುದರಿಂದ ತನ್ನನ್ನು ಕೆಲಸದಿಂದ ತೆಗೆದಿರುತ್ತಾರೆ. ನನಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ. ಆದ್ದರಿಂದ ತನ್ನನ್ನು ಇಲಾಖಾ ವಿಚಾರಣೆಯಿಂದ ಕೈಬಿಡಲು ನಿವೇದಿಸಿಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷಾದಾರಗಳನ್ನು ನಿರಾಕರಿಸಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಯಾವುದೇ ಆಧಾರಗಳು ಇರುವುದಿಲ್ಲ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಪುರಾವೆಗಳನ್ನು ಪರಾಮರ್ಶಿಸಲಾಗಿ ಎದುರುದಾರರು ಭ್ರಷ್ಟಾಚಾರ ಮಾಡುವ ಮೂಲಕ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ಆದ್ದರಿಂದ, ಎದುರುದಾರರು ಎಸಗಿದ ದುರ್ನಡತೆಗೆ ಇಲಾಖಾ ವಿಚಾರಣೆ ನಡೆಸುವುದು ನ್ಯಾಯತಾ ದೃಷ್ಟಿಯಿಂದ ಅತೀ ಅವಶ್ಯವಿರುತ್ತದೆ.

5. ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ, ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಎದುರುದಾರರು ಕ.ನಾ.ಸೇ. (ನಡತೆ) ನಿಯಮ, 1966 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅಡಿಯಲ್ಲಿ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ 3 ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

18/1/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.